ಕಥೆ

ಮುಸುಕು

ಮಲಯಾಳಂ: **ಎಂ.ಟಿ.ವಾಸುದೇವನ್ ನಾಯರ್**

ಕನ್ನಡಕ್ಕೆ: **ಮೋಹನ ಕುಂಟಾರ್**

ಕಲೆ: ಮುರಳೀಧರ ರಾಥೋಡ್

ಮಗನು ಒಬ್ಬಂಟಿಯಾದಾಗ ಮರೆವಿನ ಮುಸುಕಿನ ಒಳಗೆ ಭೂತಕಾಲದ ಎಲ್ಲವನ್ನು ಮುಚ್ಚಿಡಲು ಬಯಸಿರಬಹುದು. ಆದರೆ ಮುಸುಕಿನ ಮುಖದ ಕಪ್ಪಗಿನ ಬಲೆಯ ಕಂಡಿಗಳ ಮೂಲಕ ಕಾಣದ ಕಣ್ಣುಗಳು ಇಣಕಿ ನೋಡುತ್ತಿದ್ದುವು. ಮಗನು ತಂದೆಯೂ ಅಜ್ಜನೂ ಆದಾಗ, ವೃದ್ಧನೂ ಪ್ರಸಿದ್ಧನೂ ಆದಾಗ, ನಗರ ಪ್ರದೇಶದ ದೊಡ್ಡ ಮನೆಯ ಹಳದಿ ಕಂಬಗಳು ಮತ್ತು ಮುಂಬಾಗಿಲುಗಳನ್ನು ದೂರದಿಂದ ಕಂಡಾಗ ಎಲ್ಲವೂ ನೆನಪಾಗಿಬಿಟ್ಟವು (ವರ್ಷಗಳೇ, ಸರಿದು ನಿಲ್ಲಿ; ನೆನಪುಗಳ ಅಸ್ಥಿಪಂಜರವನ್ನು ಒಮ್ಮೆ ನೋಡಿಬಿಡಲೇ!...).

ಮನೆ ದೊಡ್ಡದಾಗಿತ್ತು. ತುಂಬಾ ದೊಡ್ಡದಾಗಿತ್ತು. ಅದು ಒಣಗಿದ ಭೂಭಾಗದ ಮಧ್ಯದಲ್ಲಿ ಸಾಗುವ ಕಗ್ಗಲ್ಲು ಹಾಸಿದ ದಾರಿ ಮೇಲಕ್ಕೇರಿ ನಂತರದ ಇಳಿಜಾರಿನ ಸಮೀಪದಲ್ಲಿತ್ತು. ಹಳದಿ ಬಣ್ಣಹಚ್ಚಿದ ಗಿಡ್ಡ ಕಂಬಗಳೂ ಇವೆ, ವರಾಂಡಗಳ ಪಕ್ಕದಲ್ಲಿ ತೂಗು ಹಾಕಿದುದು ಜಪಾನ್ ಇಂಗುದೀ ಮರಗಳ ವರ್ಣಚಿತ್ರಗಳು ಹಿಂದೊಬ್ಬ ರಾಜ್ಯವಿಲ್ಲದ ರಾಜನನ್ನು ನೆನೆದು ಮಗನಿಗೆ ದುಃಖವೆನಿಸಿತ್ತು. ಅದನ್ನು ಕೇಳುವ ಕಾಲದಲ್ಲಿ ಮಗನಿಗೆ ದುಃಖಿಸಲು ಹಾಗೂ ಪ್ರೀತಿಸಲು ಗೊತ್ತಿತ್ತು. ಕಾರಣ ಮಗ ಮನುಷ್ಯನಾಗಿರಲಿಲ್ಲ. ಮಗುವಾಗಿದ್ದ, ದೇವದೂತನಾಗಿದ್ದ.

ಮನೆಯ ಮುಂಭಾಗದಲ್ಲಿ ನಖಗಳನ್ನು ಮುಂದೆ ಮಾಡಿ ಕೈಯೆತ್ತಿ ನಿಂತು ಘರ್ಜಿಸುವ ಹಾಲು ಕಂಚಿನಿಂದ ಮಾಡಿದ ಸಿಂಹದ ಪ್ರತಿಮೆಗಳಿದ್ದುವು. ಸಿಮೆಂಟ್ ನೆಲದಲ್ಲಿ ಅರಚುತ್ತ ಉರುಳುವ ಚಕ್ರಗಳನ್ನಿಟ್ಟ ದೊಡ್ಡ ಕಬ್ಬಿಣದ ಗೇಟು. ಮೇಲೆ ಎರಡು ಶಯ್ಯಾಗಾರಗಳಿವೆ. ಅಪ್ಪ ಮತ್ತು ಅಮ್ಮ ಅಲ್ಲಿರುತ್ತಿದ್ದರು. ಮೇಲೆ ಎರಡು ತುದಿಗಳಲ್ಲಿದ್ದ ಆ ಕೋಣೆಗಳಿಗೆ ಬೇರೆ ಬೇರೆ ಏಣಿ ಮೆಟ್ಟಿಲುಗಳಿದ್ದುವು. ಏಣಿ ಮೆಟ್ಟಿಲುಗಳಿಗೆ ಬಣ್ಣ ಹಚ್ಚಿದ ದಪ್ಪಗಿನ ನಾರಿನ ನೆಲಹಾಸುಗಳನ್ನು ಹಾಸಲಾಗಿದೆ.

ಎರಡು ಶಯ್ಯಾಗಾರಗಳನ್ನು ಜೋಡಿಸಿದ್ದು ಉದ್ದವಾದ ಒಂದು ಒಳಜಗಲಿ. ಅಲ್ಲಿ ಯಾವಾಗಲೂ ಕತ್ತಲಿರುತ್ತಿತ್ತು. ಹಗಲೂ ಕೂಡಾ ಬೆಳಕಿರುವ